# ಉಪ ತಹಶೀಲ್ದಾರರು ನಾಡಕಾರ್ಯಾಲಯ ತೆಕ್ಕಲಕೋಟೆ ಇವರ ನ್ಯಾಯಾಲಯದಲ್ಲಿ

**ವಾದಿಗಳು**
1)ಅಂಜಿನಿ ತಂದೆ ದಿ: ಪರಸಪ್ಪ
2)ವಾಸಪ್ಪನಾರ ಶಿವಪ್ಪ
64-ಹಳೇಕೋಟೆ ಗ್ರಾಮ

**ಪ್ರತಿವಾದಿಗಳು**
ಯಲ್ಲಮ್ಮ ಗಂಡ ಗುಂಡಪ್ಪ
64-ಹಳೇಕೋಟೆ ಗ್ರಾಮ.

| ಕ್ರ. ಸಂ. | ತಾಲೂಕು | ಹೋಬಳಿ | ಗ್ರಾಮ | ಸರ್ವೆ ನಂ. | ವಿಸ್ತೀರ್ಣ | ತಹರೆ |
|---|---|---|---|---|---|---|
| 1. | ಸಿರುಗುಪ್ಪ | ತೆಕ್ಕಲಕೋಟೆ | 64-ಹಳೇಕೋಟೆ | 552A1 | 2-16 | -- |

ಪೀಠಿಕೆ:-

ಸಿರುಗುಪ್ಪ ತಾಲೂಕು, ತೆಕ್ಕಲಕೋಟೆ ಹೋಬಳಿ, 64-ಹಳೇಕೋಟೆ ಗ್ರಾಮದ ಮೇಲ್ಕಾಣಿಸಿದ ಜಮೀನಿನ ಪಟ್ಟಾ ಬದಲಾವಣೆಗೆ ಸಂಬಂಧಿಸಿದಂತೆ ಮೂಲ ಪಟ್ಟಾದಾರರು ಮರಣ ಹೊಂದಿರುವ ಕಾರಣ ದಿನಾಂಕ:17-10-2015ರಂದು ಯಲ್ಲಮ್ಮ ಗಂಡ: ಗುಂಡಪ್ಪ ಇವರಿಂದ ತಾಲೂಕು ಕಛೇರಿ ಭೂಮಿ ಕೇಂದ್ರದಲ್ಲಿ ಪೋತಿ ವಾರಸು ಹಕ್ಕು ಬದಲಾವಣೆಗಾಗಿ ಅರ್ಜಿ ಸ್ವೀಕೃತವಾಗಿದ್ದು, ದಿನಾಂಕ:04-11-2015 ರಂದು ನಮೂನೆ-21 ನೋಟೀಸ್ ತಯಾರಿಸಿ ಹಕ್ಕು ಬದಲಾವಣೆಗೆ ಪ್ರಕ್ರಿಯೆ ಜರುಗಿಸಲು ಕಂದಾಯ ನಿರೀಕ್ಷಕರು ತೆಕ್ಕಲಕೋಟೆ ಇವರಿಗೆ ಕಳುಹಿಸಿಕೊಡಲಾಗಿ ಗ್ರಾಮಲೆಕ್ಕಾಧಿಕಾರಿಗಳು ಗ್ರಾಮದಲ್ಲಿ ನಮೂನೆ-21 ನೋಟಿಸು ಪ್ರಚುರಪಡಿಸಿರುವ ಸಮಯದಲ್ಲಿ ನಿಗದಿತ ಅವಧಿಯೊಳಗಾಗಿ ಆಸಕ್ತಿಯುಳ್ಳವರಿಂದ ತಕರಾರು ಅರ್ಜಿ ಸ್ವೀಕೃತಗೊಂಡಿರುವುದರಿಂದ ಇದೊಂದು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು ಈ ಕಾರ್ಯಾಲಯಕ್ಕೆ ಕಡತ ಸಲ್ಲಿಸಿರುತ್ತಾರೆ.

ಸದ್ರಿ ಕಡತವನ್ನು ಈ ಕಾರ್ಯಾಲಯದ ವಿವಾದಾಸ್ಪದ ವಹಿಯಲ್ಲಿ ನಮೂದಿಸಿಕೊಂಡು ಕರ್ನಾಟಕ ಭೂ ಕಂದಾಯ ಕಾಯ್ದೆ ನಿಯಮಗಳು 1966 ನಿಯಮ 43 ಮತ್ತು 67 ರಂತೆ ವಿಚಾರಣೆ ದಿನಾಂಕ ನಿಗದಿಪಡಿಸಿ ವಾದಿ ಮತ್ತು ಪ್ರತಿವಾದಿಗಳಿಗೆ ನೋಟಿಸು ನೀಡಿ ವಿಚಾರಣೆ ಮಾಡಿ ವಿಚಾರಣೆಯನ್ನು ಮುಕ್ತಾಯ ಗೊಳಿಸಲಾಯಿತು.

ಸದ್ರಿ ವಿವಾದಾಸ್ಪದ ಪ್ರಕರಣದ ವಿಚಾರಣೆ ಸಮಯದಲ್ಲಿ ವಾದಿ ಮತ್ತು ಪ್ರತಿವಾದಿಗಳು ಹಾಜರಿರುತ್ತಾರೆ. ವಿಚಾರಣೆ ಸಮಯದಲ್ಲಿ ವಾದಿಗಳು ತಮ್ಮ ತಕರಾರು ಅರ್ಜಿಯ ಬಗ್ಗೆ ಹಾಗೂ ತಕರಾರು ಬಗ್ಗೆ ಯಾವುದೇ ಪೂರಕ ದಾಖಲೆಗಳನ್ನು ಸಲ್ಲಿಸುವಲ್ಲಿ ವಿಫಲರಾಗಿರುತ್ತಾರೆ. ಪ್ರತಿವಾದಿಗಳು ಮೂಲ ಪಟ್ಟಾದಾರರು ನನ್ನ ತಂದೆಯಾಗಬೇಕಾಗಿದ್ದು ನಮ್ಮ ತಂದೆ ತಾಯಿಗೆ ನಾನು ಒಬ್ಬಳೇ ಮಗಳು ಇರುತ್ತೇನೆ, ನಮ್ಮ ತಂದೆ ತಾಯಿ ಇಬ್ಬರು ಮರಣ ಹೊಂದಿರುತ್ತಾರೆ. ನಾನೇ ನೇರ ವಾರಸುದಾರಳು ಇರುವುದರಿಂದ ದಾಖಲೆಗಳನ್ನು ಪರಿಶೀಲಿಸಿ ದುರುದ್ದೇಶದಿಂದ ಸಲ್ಲಿಸಿರುವ ತಕರಾರು ಅರ್ಜಿಯನ್ನು ಪರಿಗಣಿಸದೇ ನನ್ನ ಹೆಸರಿನಲ್ಲಿ ಹಕು ಬದಲಾವಣೆ ಮಾಡಲು ಕೋರಿರುತ್ತಾರೆ.

ಪುಟ-2ಕ್ಕೆ

ವಿವಾದಾಸ್ಪದ ಪ್ರಕರಣದಲ್ಲಿನ ದಾಖಲೆಗಳನ್ನು ಪರಿಶೀಲಿಸಿದಾಗ ಹಾಗೂ ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಲಾಗಿ ಮೂಲ ಪಟ್ಟಾದಾರರು ಮರಣ ಹೊಂದಿರುವ ಬಗ್ಗೆ ರೂಪಾಯಿ 20/- ರೂ ಛಾಪಾ ಕಾಗದಲ್ಲಿ ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ. ಹಾಗೂ ರೂಪಾಯಿ 20/- ಛಾಪಾ ಕಾಗದದ ಮೇಲೆ ವಂಶವೃಕ್ಷವನ್ನು ನೋಟರಿ ವಕೀಲರಿಂದ ದೃಡೀಕೃತ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆ. ಹಾಗೂ ವಂಶವೃಕ್ಷವನ್ನು ಸಲ್ಲಿಸಿರುತ್ತಾರೆ. ಮೂಲ ಪಟ್ಟಾದಾರರು ಮರಣ ಹೊಂದಿರುವುದರಿಂದ ಹಾಗೂ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ 128 ಮತ್ತು 129ರ ಪ್ರಕಾರ ಕ್ರಮ ಕೈಗೊಳ್ಳುವ ಅವಶ್ಯಕತೆ ಇರುವುದರಿಂದ ಈ ಕೆಳಗಿನಂತೆ.

ಸಂ/ಕಂ/ಹ.ಬ/ವಿವಾದ/56/2015-16 ದಿನಾಂಕ: 05-04-2016

## -:<u>ಆದೇಶ</u>:-

ಪೀಠಿಕೆಯಲ್ಲಿ ವಿವರಿಸಿದ ಹಿನ್ನಲೆಯಲ್ಲಿ ಹಾಗೂ ದಾಖಲೆಗಳ ಆಧಾರದನ್ವಯ ಸಿರುಗುಪ್ಪ ತಾಲ್ಲೂಕು, ತೆಕ್ಕಲಕೋಟೆ ಹೋಬಳಿ, 64-ಹಳೇಕೋಟೆ ಗ್ರಾಮದ ಸರ್ವೆ ನಂ:552A1 ವಿ:2-16ಎಕರೆ ಜಮೀನನ್ನು ಚೆಕ್‌ಲೀಸ್ಟ್ ಪ್ರಕಾರ ಮೂಲ ಪಟ್ಟಾದಾರರ ಹೆಸರನ್ನು ಕಡಿಮೆ ಮಾಡಿ ಪೋತಿ ವಾರಸು ಫೀ ತುಂಬಿಕೊಂಡು ಯಲ್ಲಮ್ಮ ಗಂಡ: ಗುಂಡಪ್ಪ ಇವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.

ಸದ್ರಿ ಆದೇಶವನ್ನು ಬೆರಳಚ್ಚು ಮಾಡಿಸಿ ಓದಿ ತಪ್ಪುಗಳನ್ನು ತಿದ್ದಿ ದಿನಾಂಕ: 05-04-2016 ರಂದು ತೆರೆದ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಲಾಯಿತು.

ಉಪ ತಹಶೀಲ್ದಾರರು
ನಾಡ ಕಾರ್ಯಾಲಯ
ತೆಕ್ಕಲಕೋಟೆ

ಪ್ರತಿಯನ್ನು:-
1)ವಾದಿ ಮತ್ತು ಪ್ರತಿವಾದಿಗಳಿಗೆ
2) ಭೂಮಿ ಕೇಂದ್ರಕ್ಕೆ.